ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 660/2023

ಸಿ ಡಬ್ಲ್ಯೂ - 1

ಪಿ ಡಬ್ಲ್ಯೂ - 1

ದಿಃ 11-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಗಣಪತಿ ನಾಯ್ಕ |
| ತಂದೆಯ ಹೆಸರುಃ | ಸಣ್ಣಪ್ಪ ನಾಯ್ಕ |
| ವಯಸ್ಸುಃ | 68 ವರ್ಷ |
| ಉದ್ಯೋಗಃ | ರೈತಾಬಿ |
| ವಿಳಾಸಃ | ಸುಂಕಸಾಳ, ಅಂಕೋಲಾ. |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ಚಾಸಾ-4 ಮತ್ತು 5 ನನ್ನ ಮಕ್ಕಳು. ಚಾಸಾ-6 ನನ್ನ ತಮ್ಮನ ಹೆಂಡತಿ. ಚಾಸಾ-7 ನನ್ನ ತಮ್ಮ. ಶಿರಗುಂಜಿಯಲ್ಲಿ ನನ್ನ ಹಾಗೂ ಸಹೋದರ ಮತ್ತು ಸಹೋದರಿಯರ ಸಾಮಾಹಿಕ ಜಮೀನು ಇರುತ್ತದೆ. ದಿಃ25-06 ರಂದು ಸುಮಾರು 2 ವರ್ಷಗಳ ಹಿಂದೆ ಚಾಸಾ-4 ಮತ್ತು 5 ರವರು ಶಿರಗುಂಜಿಯ ನಮ್ಮ ಜಮೀನಿಗೆ ದನಕರುಗಳು ಬರಬಾರದು ಎಂದು ಬೇಲಿ ಕಟ್ಟಲು ಹೋಗಿದ್ದರು. ಆಗ 1ನೇ ಆರೋಪಿಯಾದ ನನ್ನ ಅಣ್ಣನ ಮಗನು ಬೋಳಿ ಮಕ್ಕಳೇ, ಸೂಳೇ ಮಕ್ಕಳೇ, ಬೇಲಿ ಕಟ್ಟಲು ಇದು ನಿಮ್ಮ ಅಪ್ಪನ ಜಮೀನಾ ಎಂದು ಬೈದಿರುತ್ತಾನೆ. ನಂತರ 1ನೇ ಆರೋಪಿಯು ಕತ್ತಿಯಿಂದ ಚಾಸಾ-4 ರವರ ಎಡಗೈ ಹೆಬ್ಬೆರಳನ್ನು ಕಡಿದಿರುತ್ತಾನೆ. ಚಾಸಾ-5 ರವರಿಗೂ ಸಹ ಕತ್ತಿ

ತಾಗಿ ಎಡಗೈಗೆ ಗಾಯವಾಗಿರುತ್ತದೆ. ಆಗ ಚಾಸಾ-6 ರವರು ತಪ್ಪಿಸಲು ಬಂದಾಗ ಅವರಿಗೂ ಸಹ ರಂಡೆ, ಮುಂಡೆ ಎಂದು ಬೈದು ಕೆನ್ನೆಗೆ ಹೊಡೆದಿರುತ್ತಾನೆ. ನಂತರ ಸೀರೆಯನ್ನು ಎಳೆದಿರುತ್ತಾನೆ. ಆ ಸಮಯದಲ್ಲಿ ನಾನು ಇರಲಿಲ್ಲ ಅವರು ಹೇಳಿರುತ್ತಾರೆ. ಚಾಸಾ-8 ರವರು ಬಂದು ಚಾಸಾ-4 ಮತ್ತು 5 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆಗ ಚಾಸಾ-5 ರವರು ನನಗೆ ಕರೆ ಮಾಡಿ, ವಿಷಯ ತಿಳಿಸಿದ್ದರಿಂದ ನಾನು ಅಂಕೋಲಾ ಆಸ್ಪತ್ರೆಗೆ ಬಂದಿರುತ್ತೇನೆ. ನಾನು ಬರುವಷ್ಟರಲ್ಲಿ ಅವರನ್ನು ಕಾರವಾರ ಸಿವಿಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ನಂತರ ಕಾರವಾರ ಆಸ್ಪತ್ರೆಗೆ ಹೋಗಿರುತ್ತೇನೆ. ಅವರು ಅಲ್ಲೇ ಒಂದು ವಾರ ದಾಖಲಾಗಿದ್ದರು. ಅಲ್ಲಿ ಹೊಲಿಗೆ ಹಾಕಿ ಚಿಕಿತ್ಸೆಯನ್ನು ನೀಡಿರುತ್ತಾರೆ. ಮಾರನೇ ದಿನ ಬೆಳಿಗ್ಗೆ ಠಾಣೆಗೆ ಬಂದು ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ದೂರಿನ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ-1 ಮತ್ತು ಅದರ ಮೇಲಿರುವ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ಮತ್ತೆ ಏನನ್ನೂ ಮಾಡಿರುವುದಿಲ್ಲ. ಸಾಕ್ಷಿಗೆ ಮುದ್ದೆ ಮಾಲನ್ನು ತೋರಿಸಲಾಗಿ, ಅದೇ ಕತ್ತಿ ಎಂದು ನನಗೆ ಗೊತ್ತಿರುವುದಿಲ್ಲ, ಯಾಕೆಂದರೆ ನಾನು ಆ ಸಮಯದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು 1ನೇ ಆರೋಪಿಯ ಹಿಂದೆ 2 ಮತ್ತು 3ನೇ ಆರೋಪಿತರೂ ಸಹ ಬಂದಿದ್ದರು ಎಂದು ನನ್ನ ಮಕ್ಕಳು ಹೇಳಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

<u>ಪಾಟಿ ಸವಾಲುಃ</u> ಮಾನ್ಯ ಎ.ಪಿ.ಪಿ.ಯವರಿಂದ

2. ದಿಃ 25-06-2023 ರಂದು ಘಟನೆಯಾಯಿತು ಎಂದರೆ ಸರಿ. ಸದರಿ ಘಟನೆಯು ಮಧ್ಯಾಹ್ಣ 12 ಗಂಟೆಗೆ ಆಯಿತು ಎಂದು ನಿಮಗೆ ನಿಮ್ಮ ಮಕ್ಕಳು ಹೇಳಿದ್ದರು ಎಂದರೆ ಸರಿ. ಸದರಿ ಘಟನೆಯಲ್ಲಿ 2 ಮತ್ತು 3ನೇ ಆರೋಪಿತರೂ ಸಹ ನಮ್ಮ ಗದ್ದೆ ಜಮೀನಿಗೆ ಬಂದಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ಸರಿ. ಅವರೂ ಸಹ ನಿಮ್ಮ ಮಕ್ಕಳಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. 3 ಜನ ಆರೋಪಿತರು ಸೇರಿಕೊಂಡೇ ಚಾಸಾ-4 ರಿಂದ 6 ರವರಿಗೆ ಹೊಡೆದಿದ್ದರು ಎಂದರೆ ಸರಿ. ಮತ್ತೊಮ್ಮೆ ಈ ಜಾಗದಲ್ಲಿ ಬೇಲಿ ಹಾಕಿದರೆ ನಿಮ್ಮನ್ನು ಜೀವಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.3 ಜನ ಆರೋಪಿತರು ಸೇರಿಕೊಂಡು ಚಾಸಾ-6 ರವರ ಸೀರೆಯನ್ನು ಎಳೆದು, ಕೆನ್ನೆ ಮತ್ತು ಬೆನ್ನಿನ ಮೇಲೆ ಹೊಡೆದಿರುತ್ತಾರೆ ಎಂದರೆ ಸರಿ. ನೆಲದ ಮೇಲೆ ಕೆವಡವಿ ಗಾಯನೋವು ಪಡಿಸಿರುತ್ತಾರೆ ಎಂದರೆ ಸರಿ. ಈ ವಿಷಯಕ್ಕೆ ಸಂಬಂಧಪಟ್ಟು ನೀವು ಕಾರವಾರ ಆಸ್ಪತ್ರೆಯಿಂದ ಬಂದು ರಾತ್ರಿ 9 ಗಂಟೆಗೆ ದೂರನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಮುಂದುವರೆದು ಬರಲು ತಡವಾಗಿತ್ತು ಎಂದು ನುಡಿಯುತ್ತಾರೆ. ನೀವು 3ನೇ ಆರೋಪಿಯ ಹೆಸರು ತಪ್ಪಾಗಿರುತ್ತದೆ ಎಂದು ಮರು ಹೇಳಿಕೆಯನ್ನೂ ಸಹ ಕೊಟ್ಟಿರುತ್ತೀರಿ ಎಂದರೆ ಸರಿ. ಮೊದಲು ಬೇರೆ ಯಾವುದೋ ಒಂದು ಹೆಸರು ಬಂದು ಹೋಗಿದ್ದು, ನಂತರ 3ನೇ ಆರೋಪಿಯ ಹೆಸರನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮಾನ್ಯ ಎಪಿಪಿ ರವರು ತಕರಾರು ಮಾಡಿದ್ದರಿಂದ ಪಾಟೀ ಸವಾಲನ್ನು ರೂ.200/–ಖರ್ಚಿನೊಂದಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.